ಕನ್ನಡ ಮತ್ತು ಇಂಗ್ಲಿಷ್ ಬರವಣಿಗೆಯಲ್ಲಿ ಸಕ್ರಿಯವಾಗಿ ತೊಡಗಿಸಿಕೊಂಡಿರುವ ನಯನಾ ಕಾಶ್ಯಪ್ ಜಗತ್ತಿನ ಉತ್ತಮ ಕೃತಿಗಳನ್ನು ಅರಸುತ್ತ, ಅವುಗಳನ್ನು ಕನ್ನಡಕ್ಕೆ ಅನುವಾದಿಸುವ ಕಾಯಕದಲ್ಲಿ ನಿರತರು. 'ಮೆಟ್ಟಿಲ ಹಾದಿ' ಅವರ ಕವನ ಸಂಕಲನ. ಕುಂದಾಪುರದಲ್ಲಿ ಹುಟ್ಟಿ ಬೆಳೆದ ಅವರು ಪ್ರಸ್ತುತ ಕೊಡಗು ನಿವಾಸಿ. ಮಡಿಕೇರಿಯ ಫೀಲ್ಡ್ ಮಾರ್ಷಲ್‌ಕೆ.ಎಂ. ಕಾರ್ಯಪ್ಪ ಕಾಲೇಜಿನಲ್ಲಿ ಇಂಗ್ಲಿಷ್ ವಿಭಾಗದ ಮುಖ್ಯಸ್ಥರು.

ಆಘಾತ, ಆಧುನಿಕ ಸಮಾಜದ ಸವಾಲುಗಳು, ಜೀವ-ಜೀವನದ ತಲ್ಲಣಗಳು, ನಗರೀಕರಣದಿಂದ ಉಂಟಾದ ಪರಕೀಯ ಭಾವ, ತಮ್ಮ ಆಸ್ತಿತ್ವ ಮತ್ತು ಸ್ವಾತಂತ್ರ್ಯವನ್ನು ಕಂಡುಕೊಳ್ಳಲು ಮಹಿಳೆಯರ ಹೋರಾಟ ಮುಂತಾದ ಸಂಗತಿಗಳತ್ತ ಲೇಖಕಿಯರ ಗಮನ ಹೊರಳಿತು.

ಅಮೃತಾ ಪ್ರೀತಂ, ಕಮಲಾ ದಾಸ್, ಅನಿತಾ ದೇಸಾಯಿ, ನಯನತಾರಾ ಸೈಗಲ್ ಇವರೆಲ್ಲ ಲಿಂಗಾಧಾರಿತ ಹಿಂಸೆಯನ್ನು ಕೇಂದ್ರವಾಗಿಟ್ಟುಕೊಂಡು ಬರೆದ ಲೇಖಕಿಯರು. ರುಖಯಾ ಹುಸೇನ್, ಇಸ್ಮತ್ ಚುಗ್ತಾಯಿಯಂಥ ಕ್ರಾಂತಿಕಾರಿ ಚಿಂತಕಿಯರು ಮಹಿಳಾ ಸಾಹಿತ್ಯದ ನವ ನಿರ್ಮಾಣಕಾರರಾದರು.


ಅಕ್ಕಮಹಾದೇವಿ

ಇಪ್ಪತ್ತನೇ ಶತಮಾನದ ಮಧ್ಯಕಾಲದಿಂದ ತೊಡಗಿ ಕನ್ನಡದಲ್ಲೂ ತ್ರಿವೇಣಿ, ಎಂ.ಕೆ. ಇಂದಿರಾ, ಅನುಪಮಾ ನಿರಂಜನ, ವೀಣಾ ಶಾಂತೇಶ್ವರ, ವೈದೇಹಿ, ಸಾರಾ ಅಬೂಬಕರ್ ಮುಂತಾದ ಲೇಖಕಿಯರು, ಕನ್ನಡ ಮಹಿಳಾ ಸಾಹಿತ್ಯ ಪ್ರವರ್ತಕರೆನಿಸಿದ ನಂಜನಗೂಡು ತಿರುಮಲಾಂಬಾ, ಆರ್. ಕಲ್ಯಾಣಮ್ಮ, ಶ್ಯಾಮಲಾ ಬೆಳಗಾಂವ್‌ಕರ್, ಶಾಂತಾದೇವಿ, ಸರಸ್ವತೀಬಾಯಿ ರಾಜವಾಡೆ, ಬೆಳಗೆರೆ ಜಾನಕಮ್ಮ, ಕೊಡಗಿನ ಗೌರಮ್ಮ, ಎಚ್.ವಿ. ಸಾವಿತ್ರಮ್ಮನಂತಹವರಿಂದ ಪ್ರೇರಣೆ ಪಡೆದು ಬದುಕಿನ ಒಳಸುಳಿಗಳನ್ನು, ಮಹಿಳೆಯ ಮಾನಸಿಕ, ಲೈಂಗಿಕ ಸ್ವಾಸ್ಥ್ಯ, ಕೊರತೆ, ಅಗತ್ಯಗಳನ್ನು, ಮಹಿಳೆಯ ವೈಚಾರಿಕತೆಯನ್ನು ಮುನ್ನೆಲೆಗೆ ತರುವಂತಹ ಬರಹಗಳಲ್ಲಿ ತೊಡಗಿದ್ದರು. ಅಷ್ಟರಲ್ಲಾಗಲೇ ಮಹಿಳಾ ಸಾಹಿತ್ಯದಲ್ಲಿ ಮತ್ತಷ್ಟು ಹೊಸ ದನಿಗಳು ಹೊಮ್ಮಲಾರಂಭಿಸಿದ್ದವು.

ಭಾರತೀಯ ಮಹಿಳಾ ಸಾಹಿತ್ಯಕ್ಕೆ ನೂತನ ಆಯಾಮಗಳನ್ನು, ವೈವಿಧ್ಯವನ್ನು ತಂದದ್ದು ದಲಿತ, ಬಂಡಾಯ, ಆದಿವಾಸಿ, ಬಹುಲಿಂಗೀ ಲೇಖಕಿಯರು. ಮಹಾಶ್ವೇತಾ ದೇವಿ, ಬಾಮಾ ಮತ್ತು ಕೆಲ ಉರ್ದು ಕವಯಿತ್ರಿಯರು ಸಾಮಾಜಿಕ ವ್ಯವಸ್ಥೆಯೊಳಗೇ ರೂಢಿಗತವಾಗಿ ಹೋಗಿರುವ ಶೋಷಣೆಯ ನೆಲೆಗಳು ಮತ್ತು ಜಾತಿ, ವರ್ಣ, ಲಿಂಗ, ವರ್ಗಗಳ ಅಂತರ್ ಸಂಬಂಧಗಳನ್ನು ಉದ್ದೇಶಿಸಿ ಬರೆದರೆ, ಅರುಂಧತಿ ರಾಯ್, ಜುಂಪಾ ಲಾಹಿರಿಯಂಥ ಲೇಖಕಿಯರಿಗೆ ದೇಶ ಭಾಷೆಗಳಿಂದ ದೂರ ವಲಸೆ ಹೋಗಿ ನೆಲದಪ್ಪಿದವರ ಆತಂಕ, ಅಸ್ಥಿರತೆ, ಅಸ್ಮಿತೆಗಳು ತಮ್ಮ ಬರಹ ಹಾಗೂ ಚಿಂತನೆಯ ಮೂಲ ಸ್ರೋತವಾಯಿತು.

* * *

ನೈಜೀರಿಯಾದ ಯುವ ಲೇಖಕಿ, ಚಿಂತಕಿ ಚಿಮಮಾಂಡಾ ಎನ್ ಗೋಜಿ ಅಡಿಚೀ ನೈಜೀರಿಯಾದ ಆಂತರಿಕ ಯುದ್ಧ ಮತ್ತದರ ರಾಜಕೀಯ, ವೈಯಕ್ತಿಕ ಪರಿಣಾಮಗಳನ್ನು 'ಹಾಫ್ ಆಫ್ ಎ ಯೆಲ್ಲೋ ಸನ್' (2006) ಎಂಬ ಕಾದಂಬರಿಯಲ್ಲಿ ಬಿಂಬಿಸಿದ್ದಾರೆ. ಆಫ್ರಿಕಾದ ಅನೇಕ ಕುಟುಂಬಗಳು ಅಮೆರಿಕದಲ್ಲಿ ಅನುಭವಿಸುವ ಜನಾಂಗ ದ್ವೇಷ, ಅಸ್ತಿತ್ವಹೀನತೆ ಮತ್ತು ಕ್ರೌರ್ಯವನ್ನಾಧರಿಸಿ 'ಅಮೆರಿಕಾನಾ' (2013) ಬರೆದಿದ್ದಾರೆ. ಅಡಿಚೀ ಜನ-ಜನಾಂಗ-ಜೀವನಗಳನ್ನು ಅರ್ಥೈಸಿಕೊಳ್ಳುವಲ್ಲಿ ಬಹು ದೃಷ್ಟಿಕೋನಗಳ ಅಗತ್ಯವನ್ನು ತನ್ನ 'ದ ಡೇಂಜರ್ ಆಫ್ ಎ ಸಿಂಗಲ್ ಸ್ಟೋರಿ' ಎಂಬ ಲೇಖನ-ಭಾಷಣದ ಮೂಲಕ ಏಕ ನೋಟದಿಂದಾಗುವ ಅನಾಹುತಗಳನ್ನು, ಸ್ವಾನುಭವದ ವೃತ್ತಾಂತ ಹೇಳುತ್ತಾ ಚರ್ಚಿಸುತ್ತಾರೆ. ಇವರಂತೆಯೇ ಜಿಂಬಾಂಬ್ವೆಯ ಕಾದಂಬರಿಕಾರ್ತಿ, ನಾಟಕಕಾರ್ತಿ ಸ್ಸಿಸ್ಸಿ ಡಂಗರೆಂಬಾ ವಸಾಹತೋತ್ತರ